



ಡಾ. ಎಸ್. ರಾಮಮೂರ್ತಿ

# 4-7-2013ರಿಂದ 10-7-2013ರವರೆಗೆ


ಮೇಷ

ವಾರದ ಮಧ್ಯಭಾಗದವರೆಗೂ ಅನುಕೂಲ. ಶ್ರಮವಿಲ್ಲದೆ ಕಾರ್ಯ ಸಾಧನೆ. ಆತ್ಮೀಯರ ಸಹಾಯ. ವಿರೋಧಿಗಳು ತಟಸ್ಥರಾಗುವರು. ಸೋದರರೊಡನೆ ಸಮಾಲೋಚನೆ. ಲೇವಾದೇವಿಗಳಲ್ಲಿ ಲಾಭ. ವಾರಾಂತ್ಯದಲ್ಲಿ ಕೋಪ ತಾಪ ಹೆಚ್ಚುವುದು. ಉದ್ಯೋಗ, ವ್ಯಾಪಾರ, ವೃತ್ತಿಗಳಲ್ಲಿ ನಿರೀಕ್ಷೆಗೆ ವಿರುದ್ಧ ಫಲ. ಅನಾರೋಗ್ಯ. ಶುಭದಿನ: 6; ಗಣಪತಿ, ಶಿವ ಅಷ್ಟೋತ್ತರ ಪಠಿಸಿ


ವೃಷಭ

ಕೆಲಸ ಕಾರ್ಯ ಕಲಾಪಗಳು ಸರಾಗವಾಗಿ ನಡೆಯುವುದು. ವ್ಯಾಪಾರ, ವೃತ್ತಿ ವ್ಯವಹಾರಗಳಲ್ಲಿ ಲಾಭ ವೃದ್ಧಿ. ಹಿಂದಿನ ಸಮಸ್ಯೆಗಳು ಬಗೆಹರಿಯುವುದು. ಕುಟುಂಬದಲ್ಲಿ ಶಾಂತ ವಾತಾವರಣ. ಕಲೆ ಕ್ರೀಡೆಗಳಲ್ಲಿ ಪ್ರಗತಿ. ಅಧ್ಯಯನದಲ್ಲಿ ಮುನ್ನಡೆ. ಗುರು ಹಿರಿಯರು, ಗಣ್ಯ ವ್ಯಕ್ತಿಗಳಿಂದ ಮಾರ್ಗದರ್ಶನ. ವಾಹನ ಸೌಖ್ಯ. ಸಂತಸದ ಸಂದೇಶಗಳು. ಶುಭದಿನ: 9; ಲಕ್ಷ್ಮೀ, ವಿಷ್ಣು ಅಷ್ಟೋತ್ತರ ಪಠಿಸಿ


ಮಿಥುನ

ವಾರದ ಆರಂಭದಲ್ಲಿ ಒತ್ತಡ. ಕೆಲಸ ಕಾರ್ಯಗಳಲ್ಲಿ ತಪ್ಪಾಗುವಿಕೆ. ಲೆಕ್ಕಪತ್ರಗಳ ವಿಚಾರದಲ್ಲಿ ಮನಸ್ತಾಪ. ವ್ಯಾಪಾರದಲ್ಲಿ ನಷ್ಟ. ಗ್ರಾಹಕರೊಡನೆ ವಿವಾದ. ವಾರದ ಮಧ್ಯಭಾಗದಿಂದ ಮನಶಾಂತಿ. ಆತ್ಮಬಲ ಹೆಚ್ಚುವುದು. ದೈವೀಕ ಕಾರ್ಯಗಳಲ್ಲಿ ಆಸಕ್ತಿ. ಹಿತಕರ ಸಂದೇಶಗಳು. ಉದ್ಯೋಗ ವೃತ್ತಿಗಳಲ್ಲಿ ಪ್ರಗತಿ. ಆಪ್ತರ ಆಗಮನ. ಶುಭದಿನ: 9; ಗಣಪತಿ, ವಿಷ್ಣು ಅಷ್ಟೋತ್ತರ ಪಠಿಸಿ


ಕಟಕ

ವಾರದ ಆರಂಭದಲ್ಲಿ ಸಂತೋಷ. ಬರಬೇಕಾದ ಹಣ ಬರುವುದು. ಉದ್ಯೋಗದಲ್ಲಿ ಮುನ್ನಡೆ. ವ್ಯಾಪಾರದಲ್ಲಿ ಸೂಕ್ತ ಲಾಭ. ಆತ್ಮೀಯರ ಆಗಮನ. ಪುರಾತನ ವಸ್ತುಗಳಲ್ಲಿ ಆಸಕ್ತಿ. ವಾರದ ಮಧ್ಯಭಾಗದಲ್ಲಿ ಅಶಾಂತಿ. ಅನಾರೋಗ್ಯ. ಶತ್ರುಭೀತಿ. ಕಾರ್ಯ ವೈಫಲ್ಯ. ಲೇವಾದೇವಿಗಳಲ್ಲಿ ಹಾನಿ, ಬೇಸರ. ವಾರಾಂತ್ಯದಲ್ಲಿ ಅನುಕೂಲ. ಶುಭದಿನ: 5; ಶಿವ, ಪಾರ್ವತಿ ಅಷ್ಟೋತ್ತರ ಪಠಿಸಿ


ಸಿಂಹ

ವಾರದ ಮಧ್ಯಭಾಗದವರೆಗೂ ಮನಶಾಂತಿ. ನಿರೀಕ್ಷೆಯಂತೆ ಕೆಲಸ ಕಾರ್ಯಗಳಲ್ಲಿ ಪ್ರಗತಿ. ಆಪ್ತರೊಂದಿಗೆ ಸಮಾಲೋಚನೆ. ದೈವೀಕ ಕಾರ್ಯಗಳಲ್ಲಿ ಆಸಕ್ತಿ ವೃದ್ಧಿ. ಪ್ರಯಾಣದಲ್ಲಿ ನಿರಾತಂಕ. ಅಧ್ಯಯನದಲ್ಲಿ ಮುನ್ನಡೆ. ಹೋರಾಟಗಳಲ್ಲಿ ನ್ಯಾಯಪ್ರಾಪ್ತಿ. ವಾರಾಂತ್ಯದಲ್ಲಿ ಆಲಸ್ಯ. ಲೆಕ್ಕಪತ್ರಗಳಲ್ಲಿ ತಪ್ಪಾಗುವಿಕೆ. ವ್ಯಾಪಾರ ವೈಫಲ್ಯ. ಶುಭದಿನ: 7; ಗಣಪತಿ, ಲಕ್ಷ್ಮೀ ಅಷ್ಟೋತ್ತರ ಪಠಿಸಿ


ಕನ್ಯಾ

ವಾರದ ಆರಂಭದಲ್ಲಿ ಪೂರ್ಣವಾಗದ ಕೆಲಸ ಕಾರ್ಯಗಳು. ಆದಾಯಕ್ಕಿಂತಲೂ ಖರ್ಚು ಹೆಚ್ಚು. ಅಕಾಲ ಭೋಜನ. ಹಿರಿಯರ ಮೇಲೆ ಕೋಪ. ಲೇವಾದೇವಿಗಳಲ್ಲಿ ಹಿನ್ನಡೆ. ವಾರದ ಮಧ್ಯಭಾಗದಿಂದ ಪ್ರಗತಿ. ವ್ಯಾಪಾರದಲ್ಲಿ ಮುನ್ನಡೆ. ಸಹೋದ್ಯೋಗಿಗಳಿಂದ ಸಹಕಾರ. ವಾಹನ ಸೌಖ್ಯ. ಸಂತಸವಾಗುವ ಘಟನೆಗಳು. ಶುಭದಿನ: 9; ಗಣಪತಿ, ದತ್ತಾತ್ರೇಯ ಅಷ್ಟೋತ್ತರ ಪಠಿಸಿ


ತುಲಾ

ವಾರದ ಆರಂಭದಲ್ಲಿ ಕಷ್ಟ ನಷ್ಟ. ಶ್ರಮದಿಂದ ಕಾರ್ಯ ಸಾಧನೆ. ಪೆಟ್ಟಾಗುವ ಸಾಧ್ಯತೆ. ವ್ಯಾಪಾರ, ವೃತ್ತಿ, ವ್ಯವಹಾರಗಳಲ್ಲಿ ಹಿನ್ನಡೆ. ಹಣ ಹೂಡಿಕೆ ಚಿಂತನೆ. ವಾರದ ಮಧ್ಯಭಾಗದಿಂದ ಚೇತರಿಕೆ. ಹಿರಿಯರಿಂದ ಸಹಾಯ. ಉದ್ಯೋಗದಲ್ಲಿ ಮನಃಶಾಂತಿ. ಕ್ರಯ ವಿಕ್ರಯಗಳಲ್ಲಿ ಲಾಭ. ಪತ್ರಾಗಮನ, ಹಿತಕರ ಸುದ್ದಿ. ಶುಭದಿನ: 9; ಗಣಪತಿ, ದುರ್ಗಾ ಅಷ್ಟೋತ್ತರ ಪಠಿಸಿ


ವೃಶ್ಚಿಕ

ವಾರದ ಆರಂಭದಲ್ಲಿ ಸಮಾಧಾನ. ಅಪೇಕ್ಷೆಯಂತೆ ಕಾರ್ಯ ಸಿದ್ಧಿ. ಲೇವಾದೇವಿಗಳಲ್ಲಿ ಪೈಪೋಟಿಯಿದ್ದರೂ ಲಾಭ ಪ್ರಾಪ್ತಿ. ಸಾಧುಗಳ ಭೇಟಿ. ವಾರದ ಮಧ್ಯಭಾಗದಲ್ಲಿ ಅಶಾಂತಿ. ಮಿತ್ರರೊಂದಿಗೆ ಕಲಹ ಸಂಭವ. ಅನಾರೋಗ್ಯ, ಒತ್ತಡದ ವಾರ್ತೆ. ಮೋಸವಾಗುವ ಸಾಧ್ಯತೆ. ಉದ್ಯೋಗದಲ್ಲಿ ಹಿನ್ನಡೆ. ವಾರಾಂತ್ಯದಲ್ಲಿ ಅನುಕೂಲ. ಶುಭದಿನ: 5; ದುರ್ಗಾ, ದತ್ತಾತ್ರೇಯ ಅಷ್ಟೋತ್ತರ ಪಠಿಸಿ


ಧನಸ್ಸು

ವಾರದ ಮಧ್ಯಭಾಗದವರೆಗೂ ಸಂತಸ. ಶ್ರಮವಿಲ್ಲದೆ ಕಾರ್ಯ ಸಾಧನೆ. ಪ್ರೀತಿ ಪಾತ್ರರ ಆಗಮನ. ವ್ಯಾಪಾರದಲ್ಲಿ ಸೂಕ್ತ ಲಾಭ. ಪ್ರಯಾಣ ಸೌಖ್ಯ. ಆಟ ಪಾಠಗಳಲ್ಲಿ ಮುನ್ನಡೆ. ಮಕ್ಕಳಿಂದ ಸಹಾಯ. ದೈವೀಕ ಕಾರ್ಯ ಯೋಜನೆ. ವಾರಾಂತ್ಯದಲ್ಲಿ ಗಡಿಬಿಡಿಯಿಂದ ನಡೆದುಕೊಳ್ಳುವಿಕೆ. ಅನಾರೋಗ್ಯ, ವೃತ್ತಿ ವ್ಯವಹಾರದಲ್ಲಿ ಹಿನ್ನಡೆ. ಶುಭದಿನ: 7; ಶಿವ, ಪಾರ್ವತಿ ಅಷ್ಟೋತ್ತರ ಪಠಿಸಿ


ಮಕರ

ವಾರದ ಆರಂಭದಲ್ಲಿ ಕೆಲಸ ಕಾರ್ಯಗಳಲ್ಲಿ ಮಂದಗತಿ. ವ್ಯಾಪಾರದಲ್ಲಿ ಲಾಭದ ಕೊರತೆ. ಸಂದೇಶಗಳ ವಿಳಂಬ. ಮಿತ್ರರಿಂದ ಅಸಹಕಾರ, ಅಪರಿಚಿತರ ಒತ್ತಡ. ವಾರದ ಮಧ್ಯಭಾಗದಿಂದ ಸೌಖ್ಯ. ಗೌರವ ಪ್ರಾಪ್ತಿ. ಉದ್ಯೋಗದಲ್ಲಿ ಮನಃಶಾಂತಿ. ಕ್ರಯ ವಿಕ್ರಯಗಳಿಂದ ಲಾಭ. ಸಂತಸದ ಸುದ್ದಿ. ನಿರಾತಂಕದ ಪ್ರಯಾಣ. ಗಣ್ಯರ ಭೇಟಿ. ಶುಭದಿನ: 9; ಗಣಪತಿ, ಲಕ್ಷ್ಮೀ ಅಷ್ಟೋತ್ತರ ಪಠಿಸಿ


ಕುಂಭ

ವಾರದ ಆರಂಭದಲ್ಲಿ ಅಶಾಂತಿ, ಸೋಮಾರಿತನ. ಕುಟುಂಬ ಸದಸ್ಯರಲ್ಲಿ ಭಿನ್ನಾಭಿಪ್ರಾಯ. ಉದ್ಯೋಗ, ವೃತ್ತಿಯಲ್ಲಿ ಹಿನ್ನಡೆ. ಲೇವಾದೇವಿಗಳಲ್ಲಿ ಹಾನಿ. ವಾರದ ಮಧ್ಯಭಾಗದಿಂದ ಅನುಕೂಲ. ಮಾಡಿದ ತಪ್ಪಿನ ಅರಿವಾಗುವುದು. ಕೆಲಸ ಕಾರ್ಯಗಳಲ್ಲಿ ಸಫಲತೆ. ವ್ಯಾಪಾರ ರಂಗದಲ್ಲಿ ಲಾಭ. ಗುರು ಹಿರಿಯರ ಭೇಟಿ. ಮಕ್ಕಳಿಂದ ಸಹಕಾರ. ಶುಭದಿನ: 9; ಲಕ್ಷ್ಮೀ, ವಿಷ್ಣು ಅಷ್ಟೋತ್ತರ ಪಠಿಸಿ


ಮೀನ

ವಾರದ ಆರಂಭದಲ್ಲಿ ಸಮಾಧಾನ. ಅಲ್ಪ ಶ್ರಮದಿಂದ ಕಾರ್ಯ ಸಾಧನೆ. ವ್ಯಾಪಾರದಲ್ಲಿ ಲಾಭ. ಕುಟುಂಬ ಸದಸ್ಯರಲ್ಲಿ ಹೊಂದಾಣಿಕೆ. ಮಿತ್ರರೊಂದಿಗೆ ಸಮಾಲೋಚನೆ. ವಾರದ ಮಧ್ಯಭಾಗದಲ್ಲಿ ಒತ್ತಡ. ಆರೋಗ್ಯ ವ್ಯತ್ಯಯ. ಅನಾವಶ್ಯಕ ತಿರುಗಾಟ. ಅಕಾಲ ಭೋಜನ. ಉದ್ಯೋಗದಲ್ಲಿ ಹಿನ್ನಡೆ. ವಾರಾಂತ್ಯದಲ್ಲಿ ಅನುಕೂಲ. ಶುಭದಿನ: 4; ಗಣಪತಿ, ದತ್ತಾತ್ರೇಯ ಅಷ್ಟೋತ್ತರ ಪಠಿಸಿ